ಎಂದು ಇದೆ. ದಯವಿಟ್ಟು ನಾಸಿಕ್ ಪ್ರದೇಶಕ್ಕೆ ಹೋಗಿ ನೋಡಿ. ಅಲ್ಲಿ ಬೇಕಾದಷ್ಟು ಇದೆ. ಮಹಾರಾಷ್ಟ್ರದಲ್ಲಿ ಇದನ್ನು ಜಾಸ್ತಿ ಬೆಳೆಯುತ್ತಿದ್ದಾರೆ. ಅದನ್ನು ನೋಡಿಕೊಂಡು ಬನ್ನಿ.

ಉಪಾಧ್ಯಕ್ಷರು :- ನೋಡಿ ಪರಿಶೀಲನೆ ಮಾಡಿರಿ.

ವಿಷಯ:- ಗ್ರಾಮಾಂತರ ಪ್ರದೇಶಗಳಿಗೆ ಸರ್ಕಾರಿ ಬಸ್ಸುಗಳು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 394 (2958)

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಎಷ್ಟು ಬಸ್ಸುಗಳನ್ನು ಓದಗಿಸಲಾಗಿದೆ, ಅವುಗಳ ಸಂಖ್ಯೆ ತಿಳಿಸಿ;

ಆ) ಮುಂದೆ ಎಷ್ಟು ಬಸ್ಸುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ನಿಯೋಜಿಸಲಾಗಿದೆ;

ಇ) ಕೊರಟಗೆರೆ ತಾಲ್ಲೂಕಿಗೆ ಎಷ್ಟು ಬಸ್ಸುಗಳನ್ನು ಹೊಸ ಮಾರ್ಗಗಳಲ್ಲಿ ಸಂಚರಿಸುವಂತೆ ಮಾಡಲಾಗಿದೆ?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 140 ಹೆಚ್ಚುವರಿ ಅನುಸೂಚಿಗಳನ್ನು ರಾಷ್ಟ್ರೀಕೃತ ವಲಯದ ಗ್ರಾಮೀಣ ಮಾರ್ಗಗಳಲ್ಲಿ ಓಡಿಸಲು ಯೋಚಿಸಿದೆ. ಈ ಪೈಕಿ 58 ಅನುಸೂಚಿಗಳನ್ನು ಈಗಾಗಲೇ ಪ್ರಾರಂಭಿಸಿದೆ.

ಆ) ಉಳಿದ 82 ಅನುಸೂಚಿಗಳನ್ನು 1996 ರ ಮಾರ್ಚ್ ತಿಂಗಳ ಅಂತ್ಯದೊಳಗೆ ಪ್ರಾರಂಭಿಸಲಾಗುವುದು.

ಇ) ಪ್ರಯಾಣಿಕರ ಬಸ್ಸು ಸಾರಿಗೆಯನ್ನು ಕೊರಟಗೆರೆ ತಾಲ್ಲೂಕಿನಲ್ಲಿ ರಾಷ್ಟ್ರೀಕರಿಸಿರುವುದಿಲ್ಲ. ಖಾಸಗಿ ವಾಹನ ಮಾಲೀಕರು ಈ ತಾಲ್ಲೂಕಿನಲ್ಲಿ ತಮ್ಮ ಬಸ್ಸುಗಳನ್ನು ಪ್ರಧಾನವಾಗಿ ಆಚರಿಸುತ್ತಿದ್ದಾರೆ. ರಾಷ್ಟ್ರೀಕರಣವಲ್ಲದ ವಲಯದಲ್ಲಿ ಹೊಸ ಮಾರ್ಗಗಳನ್ನು ಪ್ರಾರಂಭಿಸುವ ಯೋಜನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವುದಿಲ್ಲ.

12.20 ಪಿ. ಎಂ.

ಶ್ರೀ ಸಿ. ಚೆನ್ನಿಗಪ್ಪ :- ಮಾನ್ಯ ಅಧ್ಯಕ್ಷರೇ, ಕೊರಟಗೆರೆ ತಾಲ್ಲೂಕಿನಲ್ಲಿ ಸುಮಾರು 690 ಹಳ್ಳಿಗಳಿದ್ದು, 8 ರಿಂದ 10 ಬಸ್ಸುಗಳು ಮಾತ್ರ ಓಡಾಡುತ್ತಿವೆ. ಸಾರಿಗೆ ಸಚಿವರಿಗೆ ಸುಮಾರು 4-5 ಅರ್ಜಿಗಳನ್ನು ಕೊಟ್ಟು ಕೇಳಿಕೊಂಡಾಗ ಕೂಡ, ಯಾವ ಬಸ್ ಸೌಕರ್ಯ ಕೊಟ್ಟಿಲ್ಲ. ಅದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಂಡು ಕೇಳುತ್ತೇನೆ. ಈ ವಿಷಯದಲ್ಲಿ ಉತ್ತರ ಕೊಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಕೆ. ಎಸ್. ಬೀಳಗಿ :- ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರ ತಾಲ್ಲೂಕು ಕೊರಟಗೆರೆ, ಇದು ರಾಷ್ಟ್ರೀಕೃತ ಯೋಜನೆಯಲ್ಲಿ ಇಲ್ಲ. ಹೀಗಾಗಿ, ಅಲ್ಲಿ ನಮ್ಮ ಬಸ್ಸು ಗಳನ್ನು ಓಡಿಸುವುದಕ್ಕೆ ತಾಂತ್ರಿಕ ತೊಂದರೆ ಇದೆ. ಆದರೂ ಸಹ, ಆ ತಾಲ್ಲೂಕಿನಲ್ಲಿ 10 ಮಾರ್ಗಗಳಲ್ಲಿ 16 ಬಸ್ಸುಗಳನ್ನು ಓಡಿಸುತ್ತಿದ್ದೇವೆ. ಇನ್ನೂ ಹೆಚ್ಚಿನ ಬಸ್ ಓಡಿಸಬೇಕಾಗಿದ್ದರೆ, ತಾಂತ್ರಿಕ ತೊಂದರೆ ಇದೆ. ಏನೆಂದರೆ, ರಾಷ್ಟ್ರೀಕೃತ ಯೋಜನೆಯಲ್ಲಿ ಆ ಪ್ರದೇಶ ಬರದೇ ಇರುವುದರಿಂದ. ಈ ದಿಸೆಯಲ್ಲಿ ಸನ್ಮಾನ್ಯ ಸದಸ್ಯರಿಗೆ ಒಂದೋ, ಎರಡೋ ಬಸ್ ಬೇಕಾದರೆ ವ್ಯವಸ್ಥೆ ಮಾಡಬಹುದು.

ಶ್ರೀ ಜಿ. ಬಿ. ಶಿವಕುಮಾರ್ :- ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಈ ಸದನದಲ್ಲಿ ಗ್ರಾಮಾಂತರ ಪ್ರದೇಶದ ಸಾರಿಗೆ ವ್ಯವಸ್ಥೆ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದೇವೆ. ಇಲಾಖೆ ಮೇಲೆ ಚರ್ಚೆ ಇರಬಹುದು, ಮಾನ್ಯ ಸದಸ್ಯರುಗಳ ಪ್ರಶ್ನೆ ಇರಬಹುದು. ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಎದುರಿಸತಕ್ಕ ಸಮಸ್ಯೆ, ಗ್ರಾಮೀಣ ಸಾರಿಗೆ. ಮಾನ್ಯ ಸಚಿವರಿಗೂ ಕೂಡ ನಾವು ಕೇಳಿಕೊಂಡಿದ್ದೆವು. ಹಿಂದೆ, ನನ್ನ ಅಭಿಪ್ರಾಯದಲ್ಲಿ ಭೀಮಣ್ಣ ಖಂಡ್ರೆಯವರು ಸಾರಿಗೆ ಸಚಿವರಾಗಿದ್ದಾಗ, ವಿಭಾಗೀಯ ಮಟ್ಟದ ಸಭೆಯನ್ನು ಕರೆದು, ಆ ಪ್ರದೇಶದ ಶಾಸ ಕರು ಮತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಯಾವ ಯಾವ ಕಡೆ ಹೆಚ್ಚಿಗೆ ಬಸ್ಸು, ಇದೆ, ಯಾವ ಯಾವ ಕಡೆ ಅನುಕೂಲ ಮಾಡಿಕೊಡಬೇಕು ಎಂಬ ಬಗ್ಗೆ ಸಮಗ್ರವಾಗಿ ಚರ್ಚೆಮಾಡಿ, ಸ್ವಲ್ಪ ಮಟ್ಟಿಗಾದರೂ ಸುಧಾರಿಸಿದ್ದರು. ನಮ್ಮ ಸರ್ಕಾರ ಬಂದು 10 ತಿಂಗ ಳಾಗಿದೆ. ಮಾನ್ಯ ಸಚಿವರನ್ನು ಹಲವಾರು ಸಾರಿ ಕೇಳಿದ್ದೇನೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಶಾಸಕರ ಸಭೆ ಕರೆದು, ಅಲ್ಲಿಯ ಸಮಸ್ಯೆಯನ್ನು ತಿಳಿ ಮಾಡಬೇಕೆಂದು ಕೇಳಿದ್ದೇನೆ. ಇನ್ನು ನಮ್ಮ ಜಿಲ್ಲೆಗೇ ಆ ಅವಕಾಶ ಒದಗಿ ಬಂದಿಲ್ಲ. ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡುವುದೇನೆಂದರೆ, ಗ್ರಾಮೀಣ ಸಾರಿಗೆ ಬಗ್ಗೆ ಇಡೀ ಸದನದಲ್ಲಿ ಸಾಕಷ್ಟು ಬೇಡಿಕೆಯನ್ನು ಪ್ರಸ್ತಾವ ಮಾಡಿದ್ದಾರೆ. ಗ್ರಾಮೀಣ ಸಾರಿಗೆಯನ್ನು ಅಭಿವೃದ್ಧಿಪಡಿಸದೇ ಹೋದರೆ, ನಮ್ಮ ಸರ್ಕಾರದ ಮೇಲೆ ಗೂಬೆ ಕೂಡಿಸಿದಂಥ ಸನ್ನಿವೇಶ ಆಗುತ್ತದೆ. ಅದಕ್ಕಾಗಿ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಮೂಲಕ ತಿಳಿಯಪಡಿಸುತ್ತೇನೆ.

ಉಪಾಧ್ಯಕ್ಷರು :- ಇದರ ಬಗ್ಗೆ ನಾನೇ ಹೇಳುತ್ತೇನೆ. ಮಾನ್ಯ ಶಿವಕುಮಾರ್ ಕೊಟ್ಟಂಥ ಸಲಹೆ ಬಹಳ ಉತ್ತಮವಾದ ಸಲಹೆ. ಎಲ್ಲಾ ಜಿಲ್ಲೆಯ ಶಾಸಕರ ಸಭೆ ಕರೆದು, ಈ ಸಮಸ್ಯೆ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಶ್ರೀ ಕೆ. ಎಸ್. ಬೀಳಗಿ :- ಸನ್ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಆ ಸಲಹೆಗಳನ್ನು ಒಪ್ಪಿ, ಈಗಾಗಲೇ ಆ ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಈಗಾಗಲೇ 12 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಶಾಸಕರನ್ನು, ನಮ್ಮ ಅಧಿಕಾರಿಗಳನ್ನು ಕರೆದು, ಜಂಟಿ ಸಭೆ ಮಾಡಿ, ಅನೇಕ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಒಬ್ಬ ಮಾನ್ಯ ಸದಸ್ಯರು :- ಆ ಸಭೆಯಿಂದ ಏನೂ ಇಂಪ್ಲಿಮೆಂಟ್ ಆಗಿಲ್ಲ. ಇವತ್ತು ಹಳ್ಳಿಗಾಡು ಪ್ರದೇಶಗಳಿಗೆ ಹೋಗುವುದು ಕಷ್ಟವಾಗಿದೆ. ಈ ಸಮಸ್ಯೆಯಿಂದ ಗ್ರಾಮೀಣ ಮಟ್ಟದಲ್ಲಿ ಬಹಳ ಕಷ್ಟವಾಗಿದೆ.

ಉಪಾಧ್ಯಕ್ಷರು :- ಎಲ್ಲಾ ಸದಸ್ಯರೂ, ಅವರ ಉತ್ತರವನ್ನು ಸಮಾಧಾನದಿಂದ ಕೇಳಿ.

ಶ್ರೀ ಕೆ. ಎಸ್. ಬೀಳಗಿ :- ಇನ್ನುಳಿದ ಜಿಲ್ಲೆಗಳಲ್ಲಿ ಈ ಅಧಿವೇಶನ ಪ್ರಾರಂಭವಾದ್ದರಿಂದ ಪ್ರವಾಸ ಕಾರ್ಯಕ್ರಮ ಹಾಕಿಕೊಳ್ಳಲು ಆಗಲಿಲ್ಲ. ಈ ಅಧಿವೇಶನ ಮುಗಿದ ನಂತರ, ಬೇರೆ ಜಿಲ್ಲೆಗಳಿಗೂ ಹೋಗಿ, ಜಿಲ್ಲಾ ಶಾಸಕರು ಮತ್ತು ಅಧಿಕಾರಿಗಳನ್ನು ಕರೆದು, ಈ ಸಮಸ್ಯೆಯನ್ನು ಎಷ್ಟು ಸಾಧ್ಯವೋ ಅಷ್ಟು ಪರಿಹರಿಸುವುದಕ್ಕೆ ಪ್ರಯತ್ನಮಾಡುತ್ತೇನೆಂದು ಹೇಳುತ್ತೇನೆ. ಅವರು, ಮುಖ್ಯವಾಗಿ ಹೇಳಿದ್ದುದು, ಈ ಗ್ರಾಮೀಣ ಸೇವೆ ಬಗ್ಗೆ, ಆ ಮಾತನ್ನು ನಾನು ಒಪ್ಪುತ್ತೇನೆ. ಈ ನಮ್ಮ ಸಂಸ್ಥೆಯಿಂದ ಗ್ರಾಮೀಣ ಜನರಿಗೆ, ಸಿಗಬೇಕಾದ ಸೇವೆ ಸಿಗುತ್ತಿಲ್ಲವೆಂಬ ಮಾತನ್ನು ಒಪ್ಪಿ, ಇದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ರಾಷ್ಟ್ರೀಕೃತವಾದ ಪ್ರದೇಶಗಳಲ್ಲಿ, ಪ್ರತಿ ತಾಲ್ಲೂಕಿಗೆ 2 ಮಾರ್ಗಗಳಲ್ಲಿ 5 ಬಸ್ಸುಗಳನ್ನು ಓಡಿಸತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈಗಾಗಲೇ ಕೆಲವು ತಾಲ್ಲೂಕುಗಳಿಗೆ, 58 ಬಸ್ಸುಗಳನ್ನು ಕೊಟ್ಟಿದ್ದೇವೆ. ಬಸ್ಸುಗಳು ತಯಾರಾದ ಹಾಗೆ, ಅಯಾ ತಾಲ್ಲೂಕುಗಳಿಗೆ ಬಸ್ಸುಗಳನ್ನು ಕೊಡುತ್ತೇವೆ. ಇಷ್ಟೇ ಅಲ್ಲ, ತಮಗೆ ಗೊತ್ತಿರುವಹಾಗೆ, ತಾಲ್ಲೂಕಾ ಸ್ಥಳದಿಂದ, ಈ ಸಾರಿಗೆ ವ್ಯವಸ್ಥೆ 12 ಕಿಲೋಮೀಟರ್ ಮಾತ್ರ ಇರುವುದರಿಂದ ಇನ್ನೂ ಹೆಚ್ಚಿಗೆ 30 ಕಿಲೋಮೀಟರ್ ವರೆಗಾದರೂ ವಿಸ್ತರಿಸಬೇಕಾಗಿದೆ. ಮತ್ತು ತಾಲ್ಲೂಕಿನಲ್ಲಿರತಕ್ಕ ಎಲ್ಲಾ ಹಳ್ಳಿಗಳಿಗೂ ಬಸ್ಸುಗಳ ವ್ಯವಸ್ಥೆಯನ್ನು ಮಾಡುವ ಯೋಚನೆ ನಮ್ಮಲ್ಲಿದೆ. ಇದನ್ನು ಮಾಡುತ್ತೇವೆಂಬುದನ್ನು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ಮಾನ್ಯ ಸಚಿವರು ಈಗಾಗಲೇ ಹೇಳಿದಂತೆ, ಅಯಾ ಜಿಲ್ಲೆಗಳಿಗೆ ಭೇಟಿ ಕೊಟ್ಟು, ಪ್ರತಿ ಎರಡು ತಿಂಗಳಿಗೊಮ್ಮೆ ಶಾಸಕರ ಸಭೆ ಕರೆಯುತ್ತೇನೆಂದು ಹೇಳಿದ್ದರು. ಅದೇ ರೀತಿ ರಾಯಚೂರು ಜಿಲ್ಲೆಗೂ ಭೇಟಿ ಕೊಟ್ಟು, ಕೆಲವೊಂದು ಮಾರ್ಗಗಳನ್ನು ಮಾಡಬೇಕು. ಬಸ್ಸುಗಳನ್ನು ಮಂಜೂರ್ಮಾಡಿ, ಶಾಸಕರ ಅಭಿಪ್ರಾಯದ ಪ್ರಕಾರ ಬಸ್ಸುಗಳನ್ನು ಓಡಿಸಬೇಕು. ಅವರು ಬಂದಾಗ ಮಾತ್ರ ಮೀಟಿಂಗ್ ಸೇರಿದ್ದು, ಪುನಃ ಮೀಟಿಂಗ್ ಸೇರಿಯೇ ಇಲ್ಲ. ಅವರು, ಆಶ್ವಾಸನೆ ಕೊಟ್ಟಿದ್ದೇನೆಂದು ಹೇಳಿದರು. ಒಂದು ಮಾರ್ಗವನ್ನು ಕೂಡ ಅಧಿಕಾರಿಗಳು ಇಂಪ್ಲಿಮೆಂಟ್ ಮಾಡಿಲ್ಲ. ಡಿಸೆಂಬರ್‌ಗೆ ಹಿಂದೆ ಯಾವ ಸರ್ಕಾರ ಇತ್ತು, ಆ ಸರ್ಕಾರದ ನಂತರ, ಈ ಇಲಾಖೆ ಬಹಳಷ್ಟು ಹದಗೆಟ್ಟಿದೆ. ಇವತ್ತು ಜನರು ನಮಗೆ ಬಹಳ ದಬಾವಣೆ ಮಾಡುತ್ತಿದ್ದಾರೆ. ರಸ್ತೆ ಚಳುವಳಿ ಮತ್ತು ಸತ್ಯಾಗ್ರಹ ಮಾಡತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಸಚಿವರು ಇದರ ಬಗ್ಗೆ ಹೆಚ್ಚು ಗಮನಕೊಟ್ಟು, ಅಧಿಕಾರಿಗಳು ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು. ಮತ್ತು ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು :- ಪ್ರತಿಯೊಂದು ಪ್ರಶ್ನೆಗೂ 20-20 ಉಪ ಪ್ರಶ್ನೆ ಕೇಳುವುದಕ್ಕೆ ಹೋದರೆ ಆಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು :- ನಮ್ಮ ಜಿಲ್ಲೆಯಲ್ಲಿ ಸಮಸ್ಯೆ ಇದೆ. ನಮಗೊಂದು ಅವಕಾಶ ಕೊಡಿ. ನಮ್ಮ ಕ್ಷೇತ್ರದಲ್ಲಿ ಓಡಾಡುವುದೇ ಕಷ್ಟವಾಗಿದೆ.

ಉಪಾಧ್ಯಕ್ಷರು :- ಸಮಸ್ಯೆ ಎಲ್ಲಾ ಜಿಲ್ಲೆಗಳಲ್ಲೂ ಇದೆ. ಆದರೆ, ಎಲ್ಲಾ ಪ್ರಶ್ನೆಗಳ ಮೇಲೂ ಇಷ್ಟೊಂದು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶವಿಲ್ಲ. ಈಗಾಗಲೇ ನಾನೇ ಹೇಳಿದ್ದೇನೆ, ಅವರು ಒಪ್ಪಿಕೊಂಡಿದ್ದಾರೆ. ಪ್ರತಿ ಜಿಲ್ಲೆಯಲ್ಲಿ ಮೀಟಿಂಗ್ ಮಾಡಿ, ಎಲ್ಲರಿಗೂ ಕೇಳುತ್ತೇನೆಂಬ ಮಾತನ್ನು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು :- ರಾಷ್ಟ್ರೀಕೃತ ಮಾರ್ಗಗಳಲ್ಲಿ, ಕರ್ನಾಟಕ ರಸ್ತೆ ಸಾರಿಗೆ, ಬಸ್ಸುಗಳನ್ನು ಓಡಿಸಲು ಖಾಸಗಿಯವರಿಗೆ ಏಕೆ ವಹಿಸಿಕೊಡಬಾರದು?

ತಡೆ ಹಿಡಿಯಲಾದ ಪ್ರಶ್ನೆಗಳು :

ವಿಷಯ :- ಮಾನ್ವಿ ಕ್ಷೇತ್ರದಲ್ಲಿ ವೈದ್ಯಾಧಿಕಾರಿಗಳ ನೇಮಕ

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 380 (2856)

ಶ್ರೀ ಗಂಗಾಧರ ನಾಯಕ್, (ಮಾನ್ವಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾನ್ವಿ ಕ್ಷೇತ್ರದಲ್ಲಿ ಕವಿತಾಳ ಚಲ್ಲಟಗಿ ಮತ್ತು ಕುರುಡ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಇರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ.

ಆ) ಸೇವಾ ನಿರತ ಸ್ನಾತಕೋತ್ತರ ವಿದ್ಯಾಭ್ಯಾಸದಿಂದ ಹಿಂದಿರುಗುವ ವೈದ್ಯರುಗಳು ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯ ಸಂದರ್ಭದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದಿಂದ ರಾಜ್ಯದ ಎಲ್ಲಾ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಗಂಗಾಧರ ನಾಯಕ :- ಮಾನ್ಯ ಸಚಿವರು ಹೇಳಿದ ಉತ್ತರ ಅಸಮರ್ಪಕವಾಗಿದೆ. ಸದರಿ ವೈದ್ಯಾಧಿಕಾರಿಗಳನ್ನು ಯಾವ ತಿಂಗಳಿನಲ್ಲಿ, ಯಾವ ದಿನಾಂಕದಲ್ಲಿ ಭರ್ತಿ ಮಾಡುತ್ತೀರಿ ಎಂಬುದನ್ನು ತಿಳಿಸಬೇಕಾಗಿ ಕೇಳುತ್ತೇನೆ.

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಉಪಾಧ್ಯಕ್ಷರೇ, ಮಾನ್ವಿ ಕ್ಷೇತ್ರದ ಕವಿತಾಳ ಆರೋಗ್ಯ ಕೇಂದ್ರಕ್ಕೆ ಸುಮಾರು 2 ವೈದ್ಯರ ಹುದ್ದೆ ಮಂಜೂರಾತಿಯಾಗಿದೆ. ಇದರಲ್ಲಿ ಕಾಂಟ್ರಾಕ್ಟ್ ಆಧಾರದ ಮೇಲೆ ಒಬ್ಬರು ಮಹಿಳೆ ಮತ್ತು ಒಬ್ಬರು ಪುರುಷ ವೈದ್ಯರನ್ನು ನೇಮಕ ಮಾಡಲಾಗಿತ್ತು. ಒಬ್ಬ ವೈದ್ಯಾಧಿಕಾರಿ ಕೆಲಸ ಮಾಡುತ್ತಿದ್ದಾರೆ, ಮಹಿಳಾ ವೈದ್ಯಾಧಿಕಾರಿ ಗೈರು ಹಾಜರಾಗಿದ್ದಾರೆ. ಇನ್ನುಳಿದ ಎರಡು ಆರೋಗ್ಯ ಕೇಂದ್ರಗಳಾದ ಚಲ್ಲಟಗಿ ಮತ್ತು ಕುರುಡೆ ಕೇಂದ್ರಗಳಲ್ಲಿ ವೈದ್ಯರ ನೇಮಕ ಆಗಬೇಕಾಗಿದೆ. ಸ್ನಾತಕೋತ್ತರ ಪದವಿಯನ್ನು ಮುಗಿಸಿ ಬಂದಿರತಕ್ಕ ವೈದ್ಯರ ಪಟ್ಟಿ ಇದೆ. ಆ ಪಟ್ಟಿಯ ಪ್ರಕಾರ, ತಕ್ಷಣದಲ್ಲಿಯೇ, ಕಾಂಟ್ರಾಕ್ಟ್ ಆಧಾರದ ಮೇಲೆ, ಪ್ರತಿ ಜಿಲ್ಲೆಯಲ್ಲೂ ಖಾಲಿ ಇರತಕ್ಕ ವೈದ್ಯರ ನೇಮಕಾತಿ ಬಗ್ಗೆ, ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಸುಮಾರು 9 ಜಿಲ್ಲೆಗಳಿಂದ ಪಟ್ಟಿ ಬಂದಿದೆ. ಇನ್ನೂ 9 ಜಿಲ್ಲೆಗಳಿಂದ ಶೀಘ್ರದಲ್ಲಿಯೇ ಪಟ್ಟಿಯನ್ನು ತರಿಸಿ, ಖಾಲಿ ಇರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರನ್ನು ತುಂಬಲಾಗುವುದು.